# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

**ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 15-03-2021 ಪ್ರಶ್ನೆ ಸಂಖ್ಯೆ : 947(1298)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 15-03-2021

ಉತ್ತರಿಸುವ ಸಚಿವರು: ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ವಿಷಯ : ಭಾಷಾ ಅಲ್ಪಸಂಖ್ಯಾತ ಶಾಲೆಗಳಲ್ಲಿ ರೋಷ್ಟರ್ ನಿಯಮಗಳ ಪಾಲನೆ ಕುರಿತು

(ಅ) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಭಾಷಾ ಅಲ್ಪ ಸಂಖ್ಯಾತ ಶಾಲೆಗಳಲ್ಲಿ ರೋಷ್ಟರ್ ನಿಯಮಗಳ ವಿನಾಯಿತಿ ಕುರಿತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಿಂದ ಯಾವುದಾದರು ಅಭಿಪ್ರಾಯ ಬಂದಿದೆಯೇ; ಬಂದಿದ್ದಲ್ಲಿ, ಅಭಿಪ್ರಾಯ ಕುರಿತು ಕೈಗೊಂಡ ಕ್ರಮ ಏನು; (ಅಭಿಪ್ರಾಯದ ಕುರಿತು ವಿವರ ನೀಡುವುದು)

(ಆ) ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಇರುವಂತಹ ಇಲಾಖೆಯ ನಿಯಮಾವಳಿಗಳೇನು; ನಿಯಮಾವಳಿಗಳ ಪಾಲನೆ ಕುರಿತು ಸ್ಪಷ್ಟ ವಿವರವನ್ನು ನೀಡುವುದು;

(ಇ) ಭಾಷಾ ಅಲ್ಪಸಂಖ್ಯಾತ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಇವುಗಳ ಭರ್ತಿಗೆ ರೋಷ್ಟರ್ ನಿಯಮಾವಳಿಗಳೇ ಕಾರಣ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಯಾವ ಕಾಲಮಿತಿ ಒಳಗೆ ರೋಷ್ಟರ್ ವಿನಾಯಿತಿ ನೀಡಿ ಆದೇಶ ಹೊರಡಿಸಲಾಗುತ್ತದೆ;

(ಈ) ಇತರ ಶಿಕ್ಷಣ ಸಂಸ್ಥೆಗಳಿಗೂ ಭಾಷ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಿಗೂ ಇರುವ ರೋಷ್ಟರ್ ನಿಯಮಗಳೇನು? (ವಿವರವನ್ನು ಒದಗಿಸುವುದು)